



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰهِ الرَّحۡمٰنِ الرَّحِيۡمِ ○

1. ಸಂದೇಶವಾಹಕರೇ, ಅಲ್ಲಾಹನು ನಿಮಗೆ 'ಧರ್ಮಸಮ್ಮತ'ಗೊಳಿಸಿರುವ ವಸ್ತುವನ್ನು ನೀವೇಕೆ ನಿಷಿದ್ಧಗೊಳಿಸುತ್ತೀರಿ?[1] ನೀವು ನಿಮ್ಮ ಪತ್ನಿಯರ ಮೆಚ್ಚುಗೆಯನ್ನು ಬಯಸುತ್ತೀರಿ (ಎಂಬ ಕಾರಣ ದಿಂದಲೇ?)[2] ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

يٰۤاَيُّهَا النَّبِىُّ لِمَ تُحَرِّمُ مَاۤ اَحَلَّ اللّٰهُ لَكَ‌ۚ تَبۡتَغِىۡ مَرۡضَاتَ اَزۡوَاجِكَ‌ؕ وَاللّٰهُ غَفُوۡرٌ رَّحِيۡمٌ ①

2. ಅಲ್ಲಾಹನು ನಿಮಗೆ ನೀವು ಹಾಕಿದ ಆಣೆಗಳ ಪಾಲನೆಯಿಂದ ಮುಕ್ತರಾಗುವ ಕ್ರಮವನ್ನು ನಿಶ್ಚಯಿಸಿರುತ್ತಾನೆ.[3] ಅಲ್ಲಾಹನು

قَدۡ فَرَضَ اللّٰهُ لَـكُمۡ تَحِلَّةَ اَيۡمَانِكُمۡ‌ۚ وَاللّٰهُ مَوۡلٰٮكُمۡ‌ۚ وَهُوَ الۡعَلِيۡمُ الۡحَكِيۡمُ ②

1. ಇದೊಂದು ಪ್ರಶ್ನೆಯಲ್ಲ ಬದಲಾಗಿ ಅಸಮಾಧಾನದ ಪ್ರಕಟಣೆಯಾಗಿದೆ. ಇಲ್ಲಿ ಪ್ರವಾದಿವರ್ಯರೊಂದಿಗೆ(ಸ) ನೀವು ಈ ಕೆಲಸವನ್ನು ಯಾಕೆ ಮಾಡಿದಿರಿ ಎಂದು ಕೇಳುವುದು ಉದ್ದೇಶವಲ್ಲ. ಬದಲಾಗಿ ಅಲ್ಲಾಹನು ಧರ್ಮಸಮ್ಮತಗೊಳಿಸಿರುವ ವಿಷಯವನ್ನು ತಾವು ತಮ್ಮ ಪಾಲಿಗೆ ನಿಷಿದ್ಧಗೊಳಿಸಿಕೊಂಡಿರುವುದು ಅಲ್ಲಾಹನಿಗೆ ಇಷ್ಟವಿಲ್ಲ ಎಂದು ಎಚ್ಚರಿಕೆ ನೀಡುವುದು ಇದರ ಉದ್ದೇಶವಾಗಿದೆ. ಅವರು ಓರ್ವ ಸಾಮಾನ್ಯ ವ್ಯಕ್ತಿಯ ಸ್ಥಾನದಲ್ಲಿರದೆ ಅಲ್ಲಾಹನ ಪ್ರವಾದಿಯ ಸ್ಥಾನದಲ್ಲಿದ್ದರು. ಅವರು ತಮ್ಮ ಪಾಲಿಗೆ ಯಾವುದನ್ನಾದರೂ ನಿಷಿದ್ಧಗೊಳಿಸಿಕೊಂಡರೆ ಸಮುದಾಯವೂ ಅದನ್ನು ತಮ್ಮ ಪಾಲಿಗೆ ನಿಷಿದ್ಧವೆಂದು ಬಗೆಯುವ ಅಥವಾ ಕನಿಷ್ಠಪಕ್ಷ ಅಪ್ರಿಯವೆಂದು ಭಾವಿಸುವ ಅಪಾಯವಿತ್ತು. ಆದ್ದರಿಂದಲೇ ಅಲ್ಲಾಹನು ಅವರ ಈ ಕೆಲಸದ ಬಗ್ಗೆ ಆಕ್ಷೇಪವೆತ್ತಿದನು ಮತ್ತು ಅವರನ್ನು ಈ ನಿಷಿದ್ಧಗೊಳಿಸಿಕೊಳ್ಳುವಿಕೆಯಿಂದ ದೂರವಿರುವಂತೆ ಆಜ್ಞಾಪಿಸಿದನು. ಇದರಿಂದ ಸ್ವತಃ ಪ್ರವಾದಿವರ್ಯರಿಗೂ(ಸ) ಯಾವುದನ್ನೂ ಧರ್ಮಸಮ್ಮತ ಅಥವಾ ನಿಷಿದ್ಧಗೊಳಿಸಿಕೊಳ್ಳುವ ಅಧಿಕಾರವಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ.
2. ಪ್ರವಾದಿವರ್ಯರು(ಸ) ತಮ್ಮಿಚ್ಛೆಯಂತೆ ಅದನ್ನು ನಿಷಿದ್ಧಗೊಳಿಸಿಕೊಂಡಿರಲಿಲ್ಲ. ಬದಲಾಗಿ ಹಾಗೆ ಮಾಡಬೇಕೆಂಬುದು ಅವರ ಪತ್ನಿಯರ ಇಚ್ಛೆಯಾಗಿತ್ತು. ಪ್ರವಾದಿವರ್ಯರು(ಸ) ಅವರನ್ನು ಸಂತೋಷಪಡಿಸುವ ಸಲುವಾಗಿ ಧರ್ಮಸಮ್ಮತವಾದುದನ್ನು ತಮ್ಮ ಪಾಲಿಗೆ ನಿಷಿದ್ಧಗೊಳಿಸಿಕೊಂಡಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ನಂಬಲರ್ಹ ಪ್ರವಾದಿ ವಚನಗಳಿಂದ ತಿಳಿದು ಬರುವಂತೆ ಪ್ರವಾದಿವರ್ಯರ(ಸ) ಪತ್ನಿಯೊಬ್ಬರ (ಹ. ಝೈನಬ್‌ರ) ಬಳಿಗೆ ಎಲ್ಲಿಂದಲೋ ಜೇನುತುಪ್ಪ ಬಂದಿತ್ತು. ಅದು ಪ್ರವಾದಿವರ್ಯರಿಗೆ(ಸ) ಪಾಲಿಗೆ ಬಹಳ ಪ್ರಿಯಕರವಾಗಿತ್ತು. ಆದ್ದರಿಂದ ತಮ್ಮ ನಿತ್ಯದ ಪರಿಪಾಠಕ್ಕೆ ವ್ಯತಿರಿಕ್ತವಾಗಿ ಅವರು ಹ. ಝೈನಬ್‌ರ(ರ) ಬಳಿ ಹೆಚ್ಚು ತಂಗ ತೊಡಗಿದರು. ಇದರಿಂದ ಪ್ರವಾದಿವರ್ಯರ(ಸ) ಇತರ ಕೆಲವು ಪತ್ನಿಯರಿಗೆ ಅಸೂಯೆಯುಂಟಾಯಿತು. ಅವರೆಲ್ಲರೂ ಸೇರಿ ಅವರಲ್ಲಿ ಜೇನುತುಪ್ಪದ ಬಗ್ಗೆ ಎಂತಹ ದ್ವೇಷ ಮೂಡಿಸಿದರೆಂದರೆ ಅವರು ಜೇನನ್ನು ಎಂದೂ ಉಪಯೋಗಿಸದಿರುವ ಸಂಕಲ್ಪ ಮಾಡಿಬಿಟ್ಟರು.
3. ಅರ್ಥಾತ್- ಧರ್ಮಸಮ್ಮತವಾದುದನ್ನು ತಮ್ಮ ಪಾಲಿಗೆ ನಿಷಿದ್ಧಗೊಳಿಸಿಕೊಂಡಂತಹ ಸಂಕಲ್ಪವನ್ನು ಮುರಿದು ಬಿಡಿರಿ. ಹಾಗೆ ಮಾಡಲು ಅಲ್ಲಾಹನು ಸೂರಃ ಮಾಇದಃದ 89ನೆಯ ಸೂಕ್ತದಲ್ಲಿ ವಚನದ ನಿರ್ಬಂಧದಿಂದ ಹೊರಬರುವ ಕುರಿತು ಕಲಿಸಿರುವ ಪರಿಹಾರೋಪಾಯವನ್ನು ಅನುಸರಿಸಿರಿ.

ನಿಮ್ಮ ಸಂರಕ್ಷಕನು ಮತ್ತು ಅವನೇ ಸರ್ವಜ್ಞನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

3. (ಮತ್ತು ಈ ವಿಷಯವೂ ಗಮನಾರ್ಹವಾಗಿದೆ) ಪ್ರವಾದಿಯು ತಮ್ಮ ಓರ್ವ ಪತ್ನಿಯೊಡನೆ ಒಂದು ಮಾತನ್ನು ರಹಸ್ಯವಾಗಿ ಹೇಳಿದ್ದರು. ತರುವಾಯ ಆ ಪತ್ನಿಯು (ಇನ್ನೊಬ್ಬರಿಗೆ) ಈ ರಹಸ್ಯವನ್ನು ಬಯಲುಗೊಳಿಸಿ ಬಿಟ್ಟಾಗ ಮತ್ತು ಅಲ್ಲಾಹನು ಪ್ರವಾದಿಗೆ ಈ (ರಹಸ್ಯವನ್ನು ಬಯಲುಗೊಳಿಸಿದ) ಸುದ್ದಿಯನ್ನು ತಿಳಿಸಿದಾಗ, ಅವರು ಅದರ ಸ್ವಲ್ಪಾಂಶವನ್ನು (ಆ ಪತ್ನಿಗೆ) ತಿಳಿಸಿ ದರು ಮತ್ತು ಸ್ವಲ್ಪಾಂಶವನ್ನು ಕಡೆಗಣಿಸಿದರು. ತರುವಾಯ ಪ್ರವಾದಿಯವರು ಅವರಿಗೆ ಆ (ರಹಸ್ಯವನ್ನು ಬಯಲುಗೊಳಿಸಿದ) ಸುದ್ದಿಯನ್ನು ತಿಳಿಸಿದಾಗ ಅವರು, "ನಿಮಗೆ ಈ ಸುದ್ದಿ ಕೊಟ್ಟವ ರಾರು?" ಎಂದು ಕೇಳಿದರು. ಪ್ರವಾದಿಯವರು, "ನನಗೆ ಸರ್ವಜ್ಞನೂ ವಿವರಪೂರ್ಣನೂ ಆಗಿರುವವನು ಸುದ್ದಿ ತಿಳಿಸಿದನು" ಎಂದರು.[4]

وَاِذْ اَسَرَّ النَّبِيُّ اِلٰى بَعْضِ اَزْوَاجِهٖ حَدِيْثًا ۚ فَلَمَّا نَبَّاَتْ بِهٖ وَاَظْهَرَهُ اللّٰهُ عَلَيْهِ عَرَّفَ بَعْضَهٗ وَاَعْرَضَ عَنْۢ بَعْضٍ ۚ فَلَمَّا نَبَّاَهَا بِهٖ قَالَتْ مَنْ اَنْۢبَاَكَ هٰذَا ۗ قَالَ نَبَّاَنِيَ الْعَلِيْمُ الْخَبِيْرُ ۝٣

4. ನೀವಿಬ್ಬರೂ ಅಲ್ಲಾಹನೊಡನೆ ಪಶ್ಚಾತ್ತಾಪ ಪಡುತ್ತೀರಾದರೆ (ಇದು ನಿಮ್ಮ ಪಾಲಿಗೆ ಉತ್ತಮವಾಗಿದೆ). ಏಕೆಂದರೆ, ನಿಮ್ಮ ಹೃದಯಗಳು ನೇರ ಮಾರ್ಗದಿಂದ ಸರಿದು ಹೋಗಿವೆ[5] ಮತ್ತು ನೀವು ಪ್ರವಾದಿಯ ವಿರುದ್ಧ ಗುಂಪುಗಾರಿಕೆ ನಡೆಸಿದರೆ, ಅಲ್ಲಾಹನು ಅವರ ಸಂರಕ್ಷಕನಾಗಿದ್ದಾನೆ ಮತ್ತು ಅವನ ನಂತರ ಜಿಬ್‌ರೀಲರು, ಎಲ್ಲ ಸಜ್ಜನ ಸತ್ಯವಿಶ್ವಾಸಿಗಳು ಮತ್ತು ಎಲ್ಲ ದೇವಚರರು ಅವರ ಸಂಗಾತಿಗಳೂ ಸಹಾಯಕರೂ ಆಗಿರುವರೆಂಬುದು ನಿಮಗೆ ತಿಳಿದಿರಲಿ.[6]

اِنْ تَتُوْبَآ اِلَى اللّٰهِ فَقَدْ صَغَتْ قُلُوْبُكُمَا ۚ وَاِنْ تَظٰهَرَا عَلَيْهِ فَاِنَّ اللّٰهَ هُوَ مَوْلٰىهُ وَجِبْرِيْلُ وَصَالِحُ الْمُؤْمِنِيْنَ ۚ وَالْمَلٰٓئِكَةُ بَعْدَ ذٰلِكَ ظَهِيْرٌ ۝٤

4. ಈ ಸೂಕ್ತ ಅವತೀರ್ಣಗೊಳ್ಳಲು ಕಾರಣವಾದ ಆ ರಹಸ್ಯದ ಮಾತು ಏನಾಗಿತ್ತೆಂದು ಯಾವುದೇ ವರದಿಗಳಿಂದ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಆ ರಹಸ್ಯ ಏನಾಗಿತ್ತೆಂದು ತಿಳಿಯುವ ಔಚಿತ್ಯವೂ ಇಲ್ಲಿ ತಲೆದೋರುವುದಿಲ್ಲ. ಪ್ರವಾದಿವರ್ಯರ(ಸ) ಪಾವನ ಪತ್ನಿಯರಿಗೆ ಮತ್ತು ಪರೋಕ್ಷವಾಗಿ ಎಲ್ಲಾ ಹೊಣೆಗಾರ ಮುಸ್ಲಿಮರ ಪತ್ನಿಯರಿಗೆ ಅವರು ರಹಸ್ಯಪಾಲನೆಯಲ್ಲಿ ಬೇಜವಾಬ್ದಾರಿತನ ತೋರಬಾರದು ಎಂದು ಎಚ್ಚರಿಕೆ ನೀಡುವುದು, ಈ ವಿಷಯವನ್ನು ಕುರ್‌ಆನಿನಲ್ಲಿ ಪ್ರಸ್ತಾಪಿಸುವುದರ ಮೂಲೋದ್ದೇಶವಾಗಿದೆ. ವ್ಯಕ್ತಿ ಎಷ್ಟು ದೊಡ್ಡ ಹೊಣೆಗಾರಿಕೆಯನ್ನು ಹೊಂದಿರುತ್ತಾನೋ ಅದಕ್ಕನುಗುಣವಾಗಿ ಅವನ ಮನೆಯಿಂದ ರಹಸ್ಯಗಳು ಸೋರಿ ಹೋಗುವುದು ಅಷ್ಟೇ ಅಪಾಯಕರ ಸಂಗತಿಯಾಗಿದೆ. ವಿಷಯ ಪ್ರಮುಖವಾದುದಾಗಿರಲಿ ಅಥವಾ ಪ್ರಮುಖವಲ್ಲದುದಾಗಿರಲಿ ರಹಸ್ಯಗಳ ಪಾಲನೆಯಲ್ಲಿ ನಿರ್ಲಕ್ಷ್ಯ ವಹಿಸುವ ಅಭ್ಯಾಸವಾಗಿ ಬಿಟ್ಟರೆ ಅಪ್ರಮುಖ ವಿಷಯಗಳಂತೆ ಯಾವುದೇ ಸಂದರ್ಭದಲ್ಲಿ ಪ್ರಮುಖ ವಿಷಯಗಳೂ ಬಹಿರಂಗಗೊಳ್ಳಬಹುದು.

5. ಹ. ಉಮರ್‌ರ(ರ) ಪ್ರಕಾರ, ಆ ಇಬ್ಬರು ಎಂದು ಹ.ಆಯಿಶಾ ಮತ್ತು ಹ.ಹಫ್ಸಾರ(ರ) ಕುರಿತು ಹೇಳಲಾಗಿದೆ. ಹ. ಉಮರ್‌ರ(ರ) ಪ್ರಕಾರ ನೇರ ಮಾರ್ಗದಿಂದ ದೂರ ಸರಿಯುವುದೆಂದರೆ, ಈ ಇಬ್ಬರು ಪತ್ನಿಯರು ಪ್ರವಾದಿವರ್ಯರೊಂದಿಗೆ(ಸ) ಹೆಚ್ಚು ಸಲಿಗೆಯಿಂದ ವ್ಯವಹರಿಸತೊಡಗಿದ್ದರು. ಅದು ಅಲ್ಲಾಹನಿಗೆ ಇಷ್ಟವಾಗಲಿಲ್ಲ ಮತ್ತು ಅವನು ಆ ಬಗ್ಗೆ ಎಚ್ಚರಿಸಿದನು.

6. ಅರ್ಥಾತ್- ಪ್ರವಾದಿವರ್ಯರ(ಸ) ವಿರುದ್ಧ ಗುಂಪುಗಾರಿಕೆ ನಡೆಸಿ ನೀವು ನಿಮಗೇ ನಷ್ಟ ಉಂಟು ಮಾಡಿಕೊಳ್ಳುವಿರಿ. ಏಕೆಂದರೆ ಯಾರ ಪ್ರಭು ಅಲ್ಲಾಹನಾಗಿದ್ದಾನೋ ಮತ್ತು ಜಿಬ್‌ರೀಲ್, ದೇವಚರರು ಮತ್ತು ಸಕಲ ಸತ್ಯಸಂಧ ಸತ್ಯವಿಶ್ವಾಸಿಗಳು ಯಾರ ಸಂಗಾತಿಗಳಾಗಿದ್ದಾರೋ ಅವರ ವಿರುದ್ಧ ಗುಂಪುಗಾರಿಕೆ ನಡೆಸಿ ಯಾರೂ ಜಯಗಳಿಸಲಾರರು.

5. ಪ್ರವಾದಿಯು ನಿಮಗೆಲ್ಲರಿಗೂ ತಲಾಕ್ ನೀಡಿದರೆ ಅಲ್ಲಾಹನು ಅವರಿಗೆ ನಿಮ್ಮ ಬದಲಿಗೆ ನಿಮಗಿಂತ ಉತ್ತಮರೂ[7] ನೈಜ ಮುಸ್ಲಿಮರೂ ಸತ್ಯವಿಶ್ವಾಸವುಳ್ಳವರೂ ವಿಧೇಯರೂ ತೌಬಾ ಮಾಡುವವರೂ ಆರಾಧನಾಶೀಲೆಯರೂ ಉಪವಾಸ ವ್ರತ ಆಚರಿಸುವವರೂ ಆದ- ಹಿಂದೆ ವಿವಾಹವಾಗಿದ್ದ ಅಥವಾ ಕುಮಾರಿಯಾಗಿರುವ ಪತ್ನಿಯರನ್ನು ದಯಪಾಲಿಸಬಹುದು.

عَسٰى رَبُّهٗٓ اِنْ طَلَّقَكُنَّ اَنْ يُّبْدِلَهٗٓ
اَزْوَاجًا خَيْرًا مِّنْكُنَّ مُسْلِمٰتٍ مُّؤْمِنٰتٍ
قٰنِتٰتٍ تٰٓئِبٰتٍ عٰبِدٰتٍ سٰٓئِحٰتٍ
ثَيِّبٰتٍ وَّاَبْكَارًا ٥

6. ಸತ್ಯವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ರಕ್ಷಿಸಿಕೊಳ್ಳಿರಿ.[8] ಅದರ ಮೇಲೆ ಅತ್ಯಂತ ಕಠೋರ ಮತ್ತು ಉಗ್ರರಾದ ದೇವಚರರು ನಿಯುಕ್ತರಾಗುವರು. ಅವರೆಂದೂ ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವುದಿಲ್ಲ ಮತ್ತು ಅವರಿಗೆ ನೀಡಲಾಗುವ ಪ್ರತಿಯೊಂದು ಅಪ್ಪಣೆಯನ್ನೂ ಪಾಲಿಸುತ್ತಾರೆ.

يٰٓاَيُّهَا الَّذِيْنَ اٰمَنُوْا قُوْٓا اَنْفُسَكُمْ
وَاَهْلِيْكُمْ نَارًا وَّقُوْدُهَا النَّاسُ
وَالْحِجَارَةُ عَلَيْهَا مَلٰٓئِكَةٌ غِلَاظٌ
شِدَادٌ لَّا يَعْصُوْنَ اللّٰهَ مَآ اَمَرَهُمْ
وَيَفْعَلُوْنَ مَا يُؤْمَرُوْنَ ٦

7. (ಆಗ ಹೇಳಲಾಗುವುದು;) "ಸತ್ಯನಿಷೇಧಿಗಳೇ, ಇಂದು ನೆಪಗಳನ್ನೊಡ್ಡಬೇಡಿರಿ; ನಿಮಗೆ ನೀವು ಮಾಡುತ್ತಿದ್ದ ಕರ್ಮಗಳಿಗೆ ತಕ್ಕುದಾದ ಪ್ರತಿಫಲವನ್ನೇ ನೀಡಲಾಗುತ್ತಿದೆ."

يٰٓاَيُّهَا الَّذِيْنَ كَفَرُوْا لَا تَعْتَذِرُوا
الْيَوْمَ ۗ اِنَّمَا تُجْزَوْنَ مَا كُنْتُمْ
تَعْمَلُوْنَ ٧ ع

8. ಸತ್ಯವಿಶ್ವಾಸಿಗಳೇ, ಅಲ್ಲಾಹನೊಡನೆ ಪಶ್ಚಾತ್ತಾಪ ಪಡಿರಿ. ನಿಷ್ಕಳಂಕವಾದ ಪಶ್ಚಾತ್ತಾಪ, ನಿಮ್ಮ ಪ್ರಭು ನಿಮ್ಮ ದೋಷಗಳನ್ನು ಅಳಿಸಬಹುದು ಮತ್ತು ನಿಮ್ಮನ್ನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸಲೂ ಬಹುದು. ಅದು ಅಲ್ಲಾಹನು ತನ್ನ ಪ್ರವಾದಿಯನ್ನಾಗಲಿ, ಅವರೊಂದಿಗೆ ವಿಶ್ವಾಸವಿರಿಸಿದ ಜನರನ್ನಾಗಲಿ ಅವಮಾನಗೊಳಿಸ

يٰٓاَيُّهَا الَّذِيْنَ اٰمَنُوْا تُوْبُوْٓا اِلَى اللّٰهِ
تَوْبَةً نَّصُوْحًا ۭ عَسٰى رَبُّكُمْ اَنْ
يُّكَفِّرَ عَنْكُمْ سَيِّاٰتِكُمْ وَيُدْخِلَكُمْ
جَنّٰتٍ تَجْرِيْ مِنْ تَحْتِهَا الْاَنْهٰرُ ۙ

7. ಇದರಿಂದ ತಪ್ಪು ಕೇವಲ ಹ. ಆಯಿಶಾ ಮತ್ತು ಹ. ಹಫ್ಸಾರದು(ರ) ಮಾತ್ರವಾಗಿರಲಿಲ್ಲ, ಬದಲಾಗಿ ಇತರ ಪತ್ನಿಯರೂ(ರ) ಸ್ವಲ್ಪ ಮಟ್ಟಿಗೆ ತಪ್ಪಿತಸ್ಥರಾಗಿದ್ದರೆಂದು ವ್ಯಕ್ತವಾಗುತ್ತದೆ. ಆದ್ದರಿಂದ ಈ ಇಬ್ಬರನ್ನುದ್ದೇಶಿಸಲಾದ ನಂತರ ಈ ಸೂಕ್ತದಲ್ಲಿ ಉಳಿದೆಲ್ಲಾ ಪತ್ನಿಯರಿಗೂ ಎಚ್ಚರಿಕೆ ನೀಡಲಾಗಿದೆ. ಪ್ರವಾದಿ ವಚನಗಳಿಂದ ತಿಳಿದು ಬರುವಂತೆ ಆ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ತಮ್ಮ ಪತ್ನಿಯರಿಂದ ಎಷ್ಟು ಅಸಮಾಧಾನ ತಾಳಿದ್ದರೆಂದರೆ ಒಂದು ತಿಂಗಳ ತನಕ ಅವರಿಂದ ಸಂಬಂಧ ಕಡಿದುಕೊಂಡಿದ್ದರು. ಅವರು ಪತ್ನಿಯರಿಗೆ ತಲಾಕ್ ನೀಡಿದ್ದಾರೆಂದು ಅವರ ಸಂಗಾತಿಗಳಲ್ಲಿ ವದಂತಿ ಹರಡಿತ್ತು.

8. ತನ್ನನ್ನು ಮಾತ್ರ ನರಕಾಗ್ನಿಯಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸುವುದಷ್ಟೇ ವ್ಯಕ್ತಿಯ ಕರ್ತವ್ಯವಲ್ಲ. ಬದಲಾಗಿ ನಿಸರ್ಗ ವ್ಯವಸ್ಥೆಯು ಯಾವ ಕುಟುಂಬದ ನಾಯಕತ್ವದ ಹೊಣೆಗಾರಿಕೆಯನ್ನು ಅವನಿಗೆ ನೀಡಿದೆಯೋ ಅವರಿಗೂ ಅವರು ದೇವನ ಪ್ರೀತಿಪಾತ್ರರಾದ ದಾಸರಾಗಿ ಮಾರ್ಪಡುವಂತಹ ಶಿಕ್ಷಣ ಮತ್ತು ತರಬೇತಿ ನೀಡಲು ಪ್ರಯತ್ನಿಸಬೇಕೆಂದು ಈ ಸೂಕ್ತದಲ್ಲಿ ತಿಳಿಸಲಾಗಿದೆ. ಅವರು ನರಕದ ಹಾದಿ ಹಿಡಿದಿದ್ದರೆ ತನಗೆ ಸಾಧ್ಯವಿರುವಷ್ಟರ ಮಟ್ಟಿಗೆ ಅದನ್ನು ತಡೆಯಲು ಪ್ರಯತ್ನಿಸಬೇಕು. ಶಿಲೆಗಳು ನರಕದ ಇಂಧನವಾಗಿವೆ ಎಂದು ಪ್ರಾಯಶಃ ಕಲ್ಲಿದ್ದಲಿನ ಕುರಿತು ಹೇಳಲಾಗಿರಬಹುದು. ಇಬ್ನ್ ಮಸ್‌ಊದ್(ರ), ಇಬ್ನ್ ಅಬ್ಬಾಸ್, ಮುಜಾಹಿದ್, ಇಮಾಮ್ ಮುಹಮ್ಮದುಲ್ ಬಾಕಿರ್ ಮತ್ತು ಸುದ್ದೀ(ರ) ಅವರ ಪ್ರಕಾರ ಇದು ಗಂಧಕದ ಶಿಲೆಗಳಾಗಿವೆ.

ದಂತಹ ದಿನವಾಗಿರುವುದು.[9] ಅವರ ಜ್ಯೋತಿಯು ಅವರ ಮುಂದಿನಿಂದಲೂ ಅವರ ಬಲಬದಿಯಲ್ಲೂ ಚಲಿಸುತ್ತಿರುವುದು ಮತ್ತು ಅವರು, "ನಮ್ಮ ಪ್ರಭು, ನಮ್ಮ ಜ್ಯೋತಿಯನ್ನು ನಮಗಾಗಿ ಪರಿಪೂರ್ಣಗೊಳಿಸಿಬಿಡು ಮತ್ತು ನಮ್ಮನ್ನು ಕ್ಷಮಿಸು, ನೀನು ಸಕಲ ವಿಷಯಗಳ ಸಾಮರ್ಥ್ಯವಿರುವವನಾಗಿರುತ್ತಿ" ಎಂದು ಹೇಳುತ್ತಿರುವರು.

يَوْمَ لَا يُخْزِى اللّٰهُ النَّبِىَّ وَ الَّذِيْنَ
اٰمَنُوْا مَعَهٗ ۚ نُوْرُهُمْ يَسْعٰى بَيْنَ
اَيْدِيْهِمْ وَ بِاَيْمَانِهِمْ يَقُوْلُوْنَ
رَبَّنَآ اَتْمِمْ لَنَا نُوْرَنَا وَاغْفِرْ لَنَا ۚ
اِنَّكَ عَلٰى كُلِّ شَىْءٍ قَدِيْرٌ ﴿٨﴾

9. ಸಂದೇಶವಾಹಕರೇ, ಸತ್ಯನಿಷೇಧಿಗಳೊಂದಿಗೂ ಕಪಟವಿಶ್ವಾಸಿಗಳೊಂದಿಗೂ ಸಮರ ಹೂಡಿರಿ ಮತ್ತು ಅವರೊಡನೆ ಕಠಿಣವಾಗಿ ವರ್ತಿಸಿರಿ. ನರಕವೇ ಅವರ ನಿವಾಸವಾಗಿದೆ ಮತ್ತು ಅದು ಅತ್ಯಂತ ಕೆಟ್ಟ ನೆಲೆಯಾಗಿದೆ.

يٰۤاَيُّهَا النَّبِىُّ جَاهِدِ الْكُفَّارَ وَ
الْمُنٰفِقِيْنَ وَاغْلُظْ عَلَيْهِمْ ؕ وَمَاْوٰىهُمْ
جَهَنَّمُ ؕ وَبِئْسَ الْمَصِيْرُ ﴿٩﴾

10. ಅಲ್ಲಾಹನು ಸತ್ಯನಿಷೇಧಿಗಳ ವಿಷಯದಲ್ಲಿ ನೂಹ್ ಮತ್ತು ಲೂತ್‌ರ ಪತ್ನಿಯರನ್ನು ಉದಾಹರಣೆಯಾಗಿ ಮುಂದಿಡುತ್ತಾನೆ. ಅವರು ನಮ್ಮ ಇಬ್ಬರು ಸಜ್ಜನ ದಾಸರ ದಾಂಪತ್ಯ ಬಂಧನದಲ್ಲಿದ್ದರು. ಆದರೆ, ಅವರು ತಮ್ಮ ಆ ಪತಿಯರನ್ನು ವಂಚಿಸಿದರು[10] ಮತ್ತು ಅವರು (ಪತಿಯಂದಿರು) ಅಲ್ಲಾಹನೆದುರು ಅವರಿಗೆ ಯಾವ ಪ್ರಯೋಜನವನ್ನೂ ಒದಗಿಸದಾದರು. ಇಬ್ಬರೊಡನೆಯೂ, "ಹೋಗಿರಿ, ಅಗ್ನಿಯಲ್ಲಿ ಬೀಳುವವರ ಜೊತೆಗೆ ನೀವೂ ಬೀಳಿರಿ" ಎಂದು ಹೇಳಲಾಯಿತು.

ضَرَبَ اللّٰهُ مَثَلًا لِّلَّذِيْنَ كَفَرُوا
امْرَاَتَ نُوْحٍ وَّ امْرَاَتَ لُوْطٍ ؕ كَانَتَا
تَحْتَ عَبْدَيْنِ مِنْ عِبَادِنَا صَالِحَيْنِ
فَخَانَتٰهُمَا فَلَمْ يُغْنِيَا عَنْهُمَا مِنَ اللّٰهِ
شَيْـًٔا وَّ قِيْلَ ادْخُلَا النَّارَ مَعَ الدّٰخِلِيْنَ ﴿١٠﴾

11. ಸತ್ಯವಿಶ್ವಾಸಿಗಳ ವಿಷಯದಲ್ಲಿ ಅಲ್ಲಾಹನು ಫಿರ್‌ಔನನ ಪತ್ನಿಯ ಉದಾಹರಣೆಯನ್ನು ಮುಂದಿಡುತ್ತಾನೆ. ಅವರು, "ನನ್ನ ಪ್ರಭೂ, ನನಗಾಗಿ ನಿನ್ನ ಸ್ವರ್ಗದಲ್ಲೊಂದು ಭವನವನ್ನು ನಿರ್ಮಿಸಿಕೊಡು ಮತ್ತು ನನ್ನನ್ನು ಫಿರ್‌ಔನನಿಂದಲೂ ಅವನ ಕರ್ಮಗಳಿಂದಲೂ ರಕ್ಷಿಸು ಮತ್ತು ಅಕ್ರಮಿ ಜನಾಂಗದಿಂದ ನನ್ನನ್ನು ಪಾರುಗೊಳಿಸು" ಎಂದು ಪ್ರಾರ್ಥಿಸಿದ ಸಂದರ್ಭ-

وَضَرَبَ اللّٰهُ مَثَلًا لِّلَّذِيْنَ اٰمَنُوا امْرَاَتَ
فِرْعَوْنَ ۘ اِذْ قَالَتْ رَبِّ ابْنِ لِىْ عِنْدَكَ
بَيْتًا فِى الْجَنَّةِ وَ نَجِّنِىْ مِنْ فِرْعَوْنَ
وَ عَمَلِهٖ وَ نَجِّنِىْ مِنَ الْقَوْمِ الظّٰلِمِيْنَ ﴿١١﴾

12. ಮತ್ತು ಅವನು ಇಮ್ರಾನನ ಪುತ್ರಿ ಮರ್ಯಮರ[11] ಉದಾಹರಣೆ

وَ مَرْيَمَ ابْنَتَ عِمْرٰنَ الَّتِىْۤ اَحْصَنَتْ

9. ಅರ್ಥಾತ್- ಅವರ ಸತ್ಕರ್ಮಗಳ ಪ್ರತಿಫಲವನ್ನು ಅವನು ವ್ಯರ್ಥಗೊಳಿಸಲಾರನು. ಅವರು ದೇವಭಯದಿಂದಿದ್ದು ಏನು ಪ್ರಯೋಜನವಾಯಿತು ಎಂದು ಸತ್ಯನಿಷೇಧಿಗಳಿಗೆ ಮತ್ತು ಕಪಟವಿಶ್ವಾಸಿಗಳಿಗೆ ಹೇಳುವ ಅವಕಾಶ ಕೊಡಲಾರನು. ದೇವಧಿಕ್ಕಾರಿಗಳು ಮಾತ್ರ ನಿಂದ್ಯರಾಗುವರು. ನಿಷ್ಠಾವಂತ ಮತ್ತು ಅನುಸರಣಶೀಲ ದಾಸರಿಗೆಂದೂ ಅಂತಹ ಗತಿ ಎದುರಾಗದು.

10. ಇಲ್ಲಿ ವಂಚನೆ ಎಸಗುವುದೆಂದರೆ, ಅವರು ಅನೈತಿಕ ಕೆಲಸವನ್ನು ಮಾಡಿದರೆಂದಲ್ಲ. ಬದಲಾಗಿ ಇದರ ಅರ್ಥ ಅವರು ಸತ್ಯವಿಶ್ವಾಸದ ಹಾದಿಯಲ್ಲಿ ಹ. ನೂಹ್ ಮತ್ತು ಹ.ಲೂತ್‌ರಿಗೆ(ಅ) ನೆರವಾಗಲಿಲ್ಲ. ಅದಕ್ಕೆ ಪ್ರತಿಯಾಗಿ ಅವರು ಧರ್ಮದ ಶತ್ರುಗಳಿಗೆ ನೆರವಾಗುತ್ತಿದ್ದರು ಎಂದಾಗಿದೆ.

11. ಹ. ಮರ್ಯಮ್‌ರ(ಅ) ತಂದೆಯ ಹೆಸರೇ ಇಮ್ರಾನ್ ಎಂದಾಗಿರಬಹುದು. ಅಥವಾ ಅವರು ಇಮ್ರಾನ್‌ನ ವಂಶದ ಪೈಕಿಯವರಾದ್ದರಿಂದ ಅವರನ್ನು ಇಮ್ರಾನ್‌ನ ಪುತ್ರಿ ಎಂದು ಕರೆಯಲಾಗಿರಬಹುದು.

فَرْجَهَا فَنَفَخْنَا فِيهِ مِن رُّوحِنَا
وَصَدَّقَتْ بِكَلِمَٰتِ رَبِّهَا وَكُتُبِهِۦ
وَكَانَتْ مِنَ ٱلْقَٰنِتِينَ ⑫ ع

ಯನ್ನೂ ಮುಂದಿಡುತ್ತಾನೆ; ಅವರು ತಮ್ಮ ಮಾನವನ್ನು ಕಾಪಾಡಿ ಕೊಂಡಿದ್ದರು.[12] ತರುವಾಯ ನಾವು ಅವರೊಳಗೆ ನಮ್ಮ ಕಡೆಯಿಂದ ಆತ್ಮವನ್ನು ಊದಿದೆವು[13] ಮತ್ತು ಅವರು ತಮ್ಮ ಪ್ರಭುವಿನ ಆದೇಶಗಳನ್ನೂ ಅವನ ಗ್ರಂಥಗಳನ್ನೂ ದೃಢೀಕರಿಸಿದ್ದರು ಮತ್ತು ಅವರು ಆಜ್ಞಾಪಾಲಕರಲ್ಲಾಗಿದ್ದರು.[14]

---

12. ಅವರ ಉದರದಿಂದ ಹ. ಈಸಾರ(ಅ) ಜನನ, ಪಾಪದ ಪರಿಣಾಮವಾಗಿತ್ತು ಎಂಬ ಆರೋಪವನ್ನು ಈ ಮೂಲಕ ನಿರಾಕರಿಸಲಾಗಿದೆ. ಅನ್ನಿಸಾ ಅಧ್ಯಾಯದ 156ನೆಯ ಸೂಕ್ತದಲ್ಲಿ ಅವರ ಈ ಆರೋಪವನ್ನು 'ಘೋರ ಸುಳ್ಳಾರೋಪ' ಎಂದು ಹೇಳಲಾಗಿದೆ.
13. ಅರ್ಥಾತ್- ಅವರ ಜತೆ ಯಾವುದೇ ಪುರುಷನ ಸಂಪರ್ಕವಿಲ್ಲದೆಯೇ ನಾವು ನಮ್ಮ ವತಿಯಿಂದ ಅವರ ಗರ್ಭಾಶಯದಲ್ಲಿ ಜೀವವೊಂದನ್ನು ಹಾಕಿದೆವು.
14. ಇಲ್ಲಿ ಹ. ಮರ್ಯಮ್‌ರ(ಅ) ಉದಾಹರಣೆಯನ್ನು ಪ್ರಸ್ತಾಪಿಸುವ ಉದ್ದೇಶವೇನೆಂದರೆ, ಅಲ್ಲಾಹನು ಕನ್ಯಾವಸ್ಥೆಯಲ್ಲಿ ಪವಾಡದಿಂದ ಗರ್ಭಿಣಿಯನ್ನಾಗಿ ಮಾಡುವ ಮೂಲಕ ಅವರನ್ನು ಮಹಾ ಪರೀಕ್ಷೆಗೊಡ್ಡಿದ್ದನು. ಆದರೆ ಅವರು ತಾಳ್ಮೆಯೊಂದಿಗೆ ಅಲ್ಲಾಹನ ಇಚ್ಛೆಯ ಮುಂದೆ ಶಿರಬಾಗಿದರು.